ಪಿರಿಯಾಪಟ್ಟಣ ಕ್ಷೇತ್ರದಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿ ಕುಡಿಯುವ ನೀರಿನ ಸರಬರಾಜು ಯೋಜನೆಗಳು.

2508 (3009) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಿರಿಯಾಪಟ್ಟಣ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಣಗಾಲು ಗ್ರಾಮ ಹಾಗೂ ಕೆ.ಆರ್.ನಗರ ತಾಲ್ಲೂಕು, ಚುಂಚನಕಟ್ಟೆ ಹೋಬಳಿ ಹಳಿಯೂರು ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ನೀರಿನ ಸರಬರಾಜನ್ನು ಕಲ್ಪಿಸಲಾಗಿದೆಯೇ;

ಆ) ಹಾಗಿದಲ್ಲಿ, ಇದು ಕಳಪೆ ಮಟ್ಟದ್ದಾಗಿದ್ದು, ಸದರಿ ಎರಡು ಗ್ರಾಮಗಳಿಗೂ ಸಮರ್ಪಕ ಕುಡಿಯುವ ನೀರಿನ ವಿತರಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳಪೆ ಕಾಮಗಾರಿ ಹಾಗೂ ಅಸಮರ್ಪಕ ಸೌಲಭ್ಯ ಪೂರೈಕೆಗೆ ಕಾರಣರಾರು ಅವರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ.

ಈ) ವ್ಯವಸ್ಥಿತ ಕುಡಿಯುವ ನೀರಿನ ಸೌಕರ್ಯಕ್ಕಾಗಿ ಈ ಎರಡೂ ಗ್ರಾಮಕ್ಕೂ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇಯ (ವಿವರ ನೀಡುವುದು)

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ಹೌದು. ಕಣಗಾಲು ಮತ್ತು ಹಳಿಯೂರು ಗ್ರಾಮಗಳ ನೀರು ಸರಬರಾಜು ಯೋಜನೆಗಳು ಕಾರ್ಯಾಚರಣೆಯಲ್ಲಿರುತ್ತವೆ.

ಆ) ಕಾಮಗಾರಿಗಳು ಕಳಪೆಮಟ್ಟದ್ದಾಗಿರುತ್ತವೆಂಬುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ ಕಣಗಾಲು ಗ್ರಾಮಕ್ಕೆ ಯೋಜನೆಯಡಿಯಲ್ಲಿ ಕಲ್ಪಿಸಲಾದ ನೀರಿನ ಮೂಲಗಳು ಸಮರ್ಪಕವಾಗಿರುವುದಿಲ್ಲವೆಂದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ನೀರಿನ ಗುಣಮಟ್ಟವನ್ನು ಮತ್ತೊಮ್ಮೆ ಮೈಸೂರಿನ ಎಸ್.ಜಿ.ಸಿ.ಇ. ಮತ್ತು ಎನ್.ಐ.ಇಗಳಲ್ಲಿ ಪರೀಕ್ಷೆಗೊಳಪಡಿಸಲಾಗಿದೆ ಮತ್ತು ಕುಡಿಯಲು ಯೋಗ್ಯವಾಗಿರುತ್ತದೆಂದು ದೃಢಪಡಿಸಲಾಗಿದೆ. ಹಳಿಯೂರು ಗ್ರಾಮದಲ್ಲಿ ಯೋಜನೆಯನ್ನು ಎರಡು ಜಲಮೂಲಗಳೊಂದಿಗೆ ಕೈಗೊಳ್ಳಲಾಗಿದೆ. ಒಂದು ಹೊಸ ಜಲಮೂಲ ಮತ್ತೊಂದು ಹಾಲಿ ಇರುವ ಹೆಬ್ಬಾ ಇಳುವರಿ ಕೈಪಂಪಿನಿಂದ ಕೂಡಿದ ಕೊಳವೆಬಾವಿ ಯೋಜನೆಯನ್ನು ಹೊಸ ಜಲಮೂಲಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿ ಕಾರ್ಯಾರಂಭಗೊಳಿಸಲಾಗಿದೆ. ಇನ್ನೊಂದು ಹಾಲಿ ಇರುವ ಜಲ